ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೮**

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೊಂಬತ್ತನೇ ಅಧಿವೇಶನ

## ಬುಧವಾರ, ದಿನಾಂಕ: ೮ನೇ ಜುಲೈ, ೨೦೧೫

---

### ಸಮೂಹ – III

೧. ಅರಣ್ಯ ಸಚಿವರು

೨. ಕಂದಾಯ ಸಚಿವರು

೩. ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

೪. ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು

೫. ಸಣ್ಣ ನೀರಾವರಿ ಸಚಿವರು

೬. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು

೭. ಕಾರ್ಮಿಕ ರಾಜ್ಯ ಸಚಿವರು

---

### ಕೆರೆ ಅಂಗಳದಲ್ಲಿ ಅನಧಿಕೃತವಾಗಿ ಕಟ್ಟಡಗಳ ನಿರ್ಮಾಣ

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) –**

೧೦೬ (೯೮೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದ ಜಿಲ್ಲಾಧಿಕಾರಿಗಳು ತೆರವುಗೊಳಿಸಿರುವ ಕೆರೆಗಳ ಜಮೀನಿನ ವಿಸ್ತೀರ್ಣ ಎಷ್ಟು ; (ಕೆರೆವಾರು ವಿವರ ನೀಡುವುದು)

(ಆ) ಈ ಕೆರೆ ಅಂಗಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳೆಷ್ಟು ; ಈ ಕೆರೆ ಅಂಗಳಗಳಲ್ಲಿ ಖಾಸಗಿ ಕಟ್ಟಡ ನಿರ್ಮಾಣ ಸಂಸ್ಥೆಯವರು ನಿರ್ಮಿಸಿರುವ ವಸತಿ ಸಮುಚ್ಛಯಗಳೆಷ್ಟು ; (ವಿವರ ನೀಡುವುದು)

(ಇ) ತೆರವುಗೊಳಿಸಲಾದ ಅನಧಿಕೃತ ವಸತಿ ಕಟ್ಟಡಗಳ ಸಂಖ್ಯೆ ಎಷ್ಟು ? (ಕೆರೆವಾರು ವಿವರ ನೀಡುವುದು)

## ತುಂಗಾ ಮೇಲ್ದಂಡೆ ಯೋಜನೆಗಾಗಿ ಭೂ ಸ್ವಾಧೀನಪಡಿಸಿಕೊಂಡ ಭೂಮಿ ಬಗ್ಗೆ

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೭ (೯೬೯) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ಮೇಲ್ದಂಡೆ ಯೋಜನೆಗಾಗಿ ಭೂಸ್ವಾಧೀನ ಪಡಿಸಿಕೊಂಡ ಭೂಮಿಯ ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು, ಹೋಬಳಿವಾರು ವಿವರ ನೀಡುವುದು)

(ಆ) ಸ್ವಾಧೀನ ಪ್ರಕ್ರಿಯೆಯಲ್ಲಿ ಅಧಿಸೂಚನೆಗಿಂತ ರೈತರಿಂದ ಹೆಚ್ಚುವರಿ ಭೂಮಿ ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ ; (ಇದ್ದಲ್ಲಿ, ತಾಲ್ಲೂಕುವಾರು, ಹೋಬಳಿವಾರು ವಿವರ ನೀಡುವುದು)

(ಇ) ಈ ರೀತಿ ಹೆಚ್ಚುವರಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಪರಿಹಾರ ನೀಡಲಾಗಿದೆಯೇ ; (ನೀಡಿದ್ದಲ್ಲಿ, ತಾಲ್ಲೂಕುವಾರು, ಹೋಬಳಿವಾರು ವಿವರ ನೀಡುವುದು)

(ಈ) ಈವರೆವಿಗೂ ಪರಿಹಾರ ನೀಡದಿದ್ದಲ್ಲಿ, ಯಾವ ಅವಧಿಯೊಳಗೆ ಪರಿಹಾರ ನೀಡಲಾಗುವುದು ? (ವಿವರ ನೀಡುವುದು)

## ಕೆ.ಸಿ. ವ್ಯಾಲಿ ಯೋಜನೆ

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) –**

೧೦೮ (೧೦೨೫) ಸಣ್ಣ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಕೆರೆಗಳಿಗೆ ನೀರುಣಿಸಲು ಕೈಗೆತ್ತಿಕೊಂಡಿರುವ ಕೆ.ಸಿ.ವ್ಯಾಲಿ (ಸಂಸ್ಕರಿಸಿದ ಕೊಳಚೆ ನೀರಿನ) ಯೋಜನೆ ಎಂದಿನಿಂದ ಪ್ರಾರಂಭವಾಗಿದೆ ; ಯೋಜನೆಯ ರೂಪರೇಷೆಗಳೇನು ;

(ಆ) ಈ ಯೋಜನೆಗೆ ಮೀಸಲಿಟ್ಟಿರುವ ಅಂದಾಜು ಮೊತ್ತವೆಷ್ಟು ; ಈ ಯೋಜನೆಯು ಪೂರ್ಣಗೊಳ್ಳುವುದು ಯಾವಾಗ ?

## ಮಹಾದಾಯಿ ನೀರಾವರಿ ಯೋಜನೆ ಬಗ್ಗೆ

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) –**

೧೦೯ (೯೩೦) ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಹಾದಾಯಿ ನೀರಾವರಿ ಯೋಜನೆಯ ರೂಪರೇಷೆಗಳೇನು ;

(ಆ) ಈ ಯೋಜನೆ ಜಾರಿಯಾದರೆ ಎಷ್ಟು ಹೆಕ್ಟರ್ ಭೂಮಿಗೆ ನೀರಾವರಿ ಸೌಲಭ್ಯ ಸಿಗಲಿದೆ ;

(ಇ) ಈ ಯೋಜನೆಯ ಜಾರಿ ಈಗ ಸ್ಥಗಿತಗೊಂಡಿದೆಯೇ ; ಸ್ಥಗಿತಗೊಂಡಿದ್ದಲ್ಲಿ, ಕಾರಣಗಳೇನು ;

(ಈ) ಮನಃ ಈ ಯೋಜನೆ ಯಾವಾಗ ಅನುಷ್ಠಾನಗೊಳ್ಳುವುದು ?

## ದೇಶಿಯ ಗ್ರಾಮೀಣ ಕ್ರೀಡೆಗಳು ನಶಿಸಿ ಹೋಗುತ್ತಿರುವ ಬಗ್ಗೆ

**ಡಾ. ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೦ (೧೦೩೨) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಇತ್ತೀಚಿನ ದಿನಗಳಲ್ಲಿ ಕ್ರಿಕೆಟ್ ಆಟವು ಹೆಚ್ಚಿನ ಪ್ರಾಧಾನ್ಯತೆ ಪಡೆಯುತ್ತಿದ್ದು, ದೇಶೀಯ ಗ್ರಾಮೀಣ ಕ್ರೀಡೆಗಳು ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ದೇಶೀಯ ಗ್ರಾಮೀಣ ಕ್ರೀಡೆಗಳನ್ನು ಉಳಿಸಿ–ಬೆಳೆಸುವ ಬಗ್ಗೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಯುವ ಸಬಲೀಕರಣಕ್ಕಾಗಿ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು?

## ರಾಜ್ಯದಲ್ಲಿರುವ ಕ್ರೀಡಾಂಗಣಗಳ ಮತ್ತು ತರಬೇತುದಾರರುಗಳ ಸಮಸ್ಯೆಗಳ ಬಗ್ಗೆ

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೧ (೯೫೩) ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಹೊರಾಂಗಣ ಮತ್ತು ಒಳಾಂಗಣ ಕ್ರೀಡಾಂಗಣಗಳು ಎಷ್ಟು; (ಜಿಲ್ಲಾವಾರು ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ರಾಜ್ಯದ ವಿವಿಧ ಕ್ರೀಡೆಯ ಕ್ರೀಡಾಪಟುಗಳ ತರಬೇತಿಗಾಗಿ ಇರುವ ಕೋಚ್‌ಗಳ ಸಂಖ್ಯೆ ಎಷ್ಟು ; ಇವರಲ್ಲಿ ಖಾಯಂ, ಗುತ್ತಿಗೆ, ಗೌರವಧನ ಇನ್ನಿತರ ರೂಪದಲ್ಲಿ ತರಬೇತಿಗಾರರಾಗಿ ಕಾರ್ಯ ನಿರ್ವಹಿಸುತ್ತಿರುವವರು ಎಷ್ಟು ; ಇವರುಗಳಿಗೆ ನೀಡುತ್ತಿರುವ ವೇತನ, ಭತ್ಯೆ ಸೇರಿದಂತೆ ನೀಡುವ ಸೌಲಭ್ಯಗಳೇನು ? (ಕ್ರೀಡಾವಾರು ಮಾಹಿತಿ ಒದಗಿಸುವುದು)

## ಜಿಂಕೆ ಹಾವಳಿ ಹೆಚ್ಚಾಗಿರುವ ಬಗ್ಗೆ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೨ (೧೦೨೩) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಪ್ಪಳ ಜಿಲ್ಲೆಯಲ್ಲಿ ಜಿಂಕೆ ಹಾವಳಿ ಹೆಚ್ಚಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಜಿಂಕೆ ಹಾವಳಿಯಿಂದ ಹಾನಿಗೊಳಗಾಗುತ್ತಿರುವ ಒಟ್ಟು ಜಮೀನು ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಇ) ೨೦೧೦–೧೧ನೇ ಸಾಲಿನಿಂದ ಇಲ್ಲಿಯವರೆಗೂ ರೈತರಿಗೆ ವಿತರಿಸಲಾದ ಪರಿಹಾರಧನದ ಮೊತ್ತ ಎಷ್ಟು ; ತಾಲ್ಲೂಕುವಾರು ವಿವರ ನೀಡುವುದು ;

(ಈ) ೨೦೧೦–೧೧ನೇ ಸಾಲಿನಲ್ಲಿ ಜಿಂಕೆ ಹಾವಳಿಯಿಂದ ತೊಂದರೆಗೊಳಗಾದ ಎಷ್ಟು ರೈತರು ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ; (ತಾಲ್ಲೂಕುವಾರು ವಿವರ ನೀಡುವುದು)

(ಉ) ಪ್ರಸಕ್ತ ವರ್ಷದಲ್ಲಿ ಪರಿಹಾರ ಕೋರಿ ಸ್ವೀಕೃತವಾಗಿರುವ ಅರ್ಜಿಗಳು ಎಷ್ಟು; ಆ ಪೈಕಿ ಎಷ್ಟು ಅರ್ಜಿಗಳಿಗೆ ಪರಿಹಾರವನ್ನು ನೀಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

## ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಸಾಲ ಮನ್ನಾ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) –**

೧೧೩ (೧೦೪೬) ಜವಳಿ ಮತ್ತು ಬಂದರು ಒಳನಾಡು ಜಲ ಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಎಷ್ಟು ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರು ಬ್ಯಾಂಕ್‌ನಿಂದ ಸಾಲ ಪಡೆದು ಬಟ್ಟೆ ತಯಾರಿಕೆಯಲ್ಲಿ ನಷ್ಟ ಅನುಭವಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರಿಗೆ ಸಾಲ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ ; ಈಗಾಗಲೇ ಎಷ್ಟು ಫಲಾನುಭವಿಗಳು ಸಾಲ ಮನ್ನಾ ಮಾಡಲು ಅರ್ಜಿ ಸಲ್ಲಿಸಿದ್ದಾರೆ ಇವರಲ್ಲಿ ಎಷ್ಟು ಫಲಾನುಭವಿಗಳಿಗೆ ಸಾಲ ಮನ್ನಾ ಮಾಡಲಾಗಿದೆ ; ಬಾಕಿ ಇರುವ ಪ್ರಕರಣಗಳೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ಸರ್ಕಾರವು ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳ ನೇಕಾರರ ಪುನಃಶ್ಚೇತನಕ್ಕೆ ಯಾವ ಕ್ರಮ ಕೈಗೊಂಡಿದೆ ;

(ಈ) ೨೦೧೫–೧೬ನೇ ಸಾಲಿನಲ್ಲಿ ಹೈದರಾಬಾದ್ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಸಾಲ ಮನ್ನಾ ಮಾಡಲು ಎಷ್ಟು ಅನುದಾನ ಮಂಜೂರು ಮಾಡಲಾಗಿದೆ? (ಮಾಹಿತಿ ನೀಡುವುದು)

## ಕರಾವಳಿಯ ಕಡಲ್ಕೋರೆತ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೪ (೯೭೪) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರಾವಳಿಯ ಜಿಲ್ಲೆಯುದ್ದಕ್ಕೂ ಮಳೆಗಾಲದ ಪ್ರಾರಂಭದಲ್ಲಿ ಕಡಲ್ಕೊರೆತ ಉಂಟಾಗಿ ಅಪಾರ ಆಸ್ತಿ–ಪಾಸ್ತಿ ಹಾನಿಯಾಗಿ ನಷ್ಟ ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

(ಆ) ಪ್ರತಿ ಭಾರಿ ತಾತ್ಕಾಲಿಕ, ಅವೈಜ್ಞಾನಿಕ ತಡೆಗೋಡೆ ನಿರ್ಮಾಣ ಮಾಡುತ್ತಿದ್ದು, ಅಪಾರ ಪ್ರಮಾಣದ ಕಲ್ಲು ಬಂಡೆ ಸಮುದ್ರ ಸೇರುತ್ತಿದ್ದು, ಅನುದಾನ ಪೋಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಕಾಮಗಾರಿಯ ಹಂಚಿಕೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು ಹಾಗೂ ಕಳಪೆ ಕಾಮಗಾರಿ ನಡೆಸಲಾಗುತ್ತಿರುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಈ) ಕಳೆದ ೩ ವರ್ಷಗಳಲ್ಲಿ ಕಡಲ್ಕೊರೆತ ಮತ್ತು ತಡೆಗೋಡೆ ನಿರ್ಮಾಣಕ್ಕೆ ಖರ್ಚಾದ ಅನುದಾನ ಎಷ್ಟು ; (ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

(ಉ) ಮಹಾರಾಷ್ಟ್ರ, ಗೋವಾ ಮಾದರಿಯಂತೆ ಶಾಶ್ವತ ತಡೆಗೋಡೆ ನಿರ್ಮಾಣಕ್ಕೆ ರಾಜ್ಯದಲ್ಲಿ ಇರುವ ತೊಡಕುಗಳೇನು ; ವೈಜ್ಞಾನಿಕ, ಶಾಶ್ವತ ತಡೆಗೋಡೆ ನಿರ್ಮಾಣ ಮಾಡಿ, ಕರಾವಳಿಯ ಜನರು ಹಾಗೂ ಆಸ್ತಿ–ಪಾಸ್ತಿ ರಕ್ಷಣೆಯ ಬಗ್ಗೆ ಸರ್ಕಾರದ ಯೋಜನೆಗಳೇನು ? (ವಿವರ ನೀಡುವುದು)

## ರೈತರ ಜಮೀನಿನ ಸರ್ವೆ ಕಾರ್ಯ ವಿಳಂಬವಾಗಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೫ (೧೦೪೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ರೈತರು ತಮ್ಮ ಜಮೀನಿನ ಸರ್ವೆಗಾಗಿ ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸಲ್ಲಿಸಿರುವ ಅರ್ಜಿಗಳಲ್ಲಿ ಇದುವರೆವಿಗೂ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಿ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ; ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ; ಬಾಕಿ ಉಳಿಸಿಕೊಳ್ಳಲು ಕಾರಣಗಳೇನು ;

(ಇ) ರಾಜ್ಯದ ರೈತರ ಮನವಿಗಳಿಗೆ ಸರ್ವೆ ಇಲಾಖೆ ಅಧಿಕಾರಿಗಳು ಕಿಂಚಿತ್ತು ಸ್ಪಂದಿಸದೆ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರ ಗಮನಿಸಿದೆಯೇ;

(ಈ) ರೈತರ ಸಮಸ್ಯೆಗಳಿಗೆ ಸ್ಪಂದಿಸದ ಅಧಿಕಾರಿ ಮತ್ತು ನೌಕರರು ಯಾರು ; ಇವರುಗಳ ವಿರುದ್ಧ ಸರ್ಕಾರ ಕೈಗೊಳ್ಳಲಿರುವ ಶಿಸ್ತಿನ ಕ್ರಮಗಳೇನು ;

(ಉ) ರೈತರ ಜಮೀನಿನ ಸರ್ವೆ ಕಾರ್ಯ ತ್ವರಿತವಾಗಿ ಪೂರೈಸಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ? (ವಿವರ ನೀಡುವುದು)

## ಗಣಿ ಕಂಪನಿಗಳಿಂದ ತೆರಿಗೆ ಬಾಕಿ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) –**

೧೧೬ (೯೪೦) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಅರಣ್ಯ ಇಲಾಖೆಗೆ ಯಾವ್ಯಾವ ಗಣಿ ಕಂಪನಿಗಳು / ಗಣಿ ಮಾಲೀಕರು ವಿವಿಧ ತೆರಿಗೆಗಳನ್ನು ಪಾವತಿಸುವುದನ್ನು ಬಾಕಿ ಉಳಿಸಿಕೊಂಡಿದ್ದಾರೆ ; ಬಾಕಿ ಮೊತ್ತ ಎಷ್ಟು ; (ವಿವರ ನೀಡುವುದು)

(ಆ) ಬಾಕಿ ವಸೂಲಿ ಮಾಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಯಾವ ಅವಧಿಯೊಳಗೆ ಬಾಕಿಯನ್ನು ವಸೂಲು ಮಾಡಲಾಗುವುದು ?

## ಕರ್ನಾಟಕ ರಾಜ್ಯದಲ್ಲಿ ಕಡಲ ಕೊರೆತ ತಡೆಗಟ್ಟಲು ತಡೆಗೋಡೆಗಳು

**ಶ್ರೀ ಐವಾನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) –**

೧೧೭ (೧೦೦೪) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿ ಕಡಲ ಕೊರೆತ ತಡೆಗೋಡೆಗಳನ್ನು ನಿರ್ಮಿಸಲು ೨೦೧೩–೧೪ ಮತ್ತು ೨೦೧೪–೧೫ನೇ ಸಾಲಿನಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ೨೦೧೪–೧೫ನೇ ಸಾಲಿನಲ್ಲಿ ಕಡಲ ಕೊರೆತವನ್ನು ತಡೆಗಟ್ಟಲು ಬಂದರು ಇಲಾಖೆಯು ಯಾವ ಮಾದರಿಯ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ; (ವಿವರ ನೀಡುವುದು)

(ಇ) ಸಮುದ್ರ ಬದಿಯಲ್ಲಿ ವಾಸಿಸುತ್ತಿರುವ ಕುಟುಂಬಗಳನ್ನು ಸ್ಥಳಾಂತರಿಸಿ ಪುನರ್ವಸತಿ ಕಲ್ಪಿಸಲು ಇಲಾಖೆಯ ಮುಂದೆ ಯೋಜನೆ ಇದೆಯೇ ; ಇದ್ದರೆ ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಈ) ೨೦೧೪–೧೫ನೇ ಸಾಲಿನಲ್ಲಿ ಸಮುದ್ರ ಕೊರೆತ ಉಂಟಾಗಿ ಮನೆ ಮತ್ತು ಆಸ್ತಿ ಕಳೆದುಕೊಂಡವರ ಸಂಖ್ಯೆ ಎಷ್ಟು ; ಕಡಲ ಅಬ್ಬರದ ತೀವ್ರತೆಯನ್ನು ತಡೆಯಲು ಪ್ರಸ್ತುತ ನಡೆಸುವ ಕಾಮಗಾರಿಗಳು ಕೊರೆತ ತಡೆಯುವ ಶಕ್ತಿ ಹೊಂದಿದೆಯೇ; ೨೦೧೨ ರಿಂದ ೨೦೧೫ನೇ ಸಾಲಿನವರೆಗೆ ಖರ್ಚು ಮಾಡಿದ ಅನುದಾನ ಎಷ್ಟು ;

(ಉ) ಕಡಲ ಕೊರೆತ ತಡೆಗಟ್ಟಲು ಶಾಶ್ವತ ತಡೆಗೋಡೆ ನಿರ್ಮಿಸಲು ಇಲಾಖೆಯ ಮುಂದೆ ಪ್ರಸ್ತಾವನೆ ಇದೆಯೇ ?

**ಪಂತಬಾಳೇಕುಂದರಗಿ ನೂಲಿನ ಗಿರಣಿಯನ್ನು ಪುನಃರಾರಂಭಿಸುವ ಬಗ್ಗೆ**

**ಶ್ರೀ ಮಹಾಂತೇಶ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) –**

೧೧೮ (೯೯೩) ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿಯಲ್ಲಿ ಇರುವ (ಪಂತಬಾಳೇಕುಂದರಗಿ) ನೂಲಿನ ಗಿರಣಿ ಮುಚ್ಚಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಆ ನೂಲಿನ ಗಿರಣಿ ಮುಚ್ಚಿದ್ದರಿಂದ ಕೆಲಸಗಾರರು ನಿರುದ್ಯೋಗಿಗಳಾದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಸದರಿ ಗಿರಣಿಯನ್ನು ಪುನರಾರಂಭಿಸಲು ಇರುವ ತೊಂದರೆಗಳು ಏನು ;

(ಈ) ಹಾಗಿದ್ದಲ್ಲಿ, ಆ ಮಿಲ್‌ನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಿಸಲಾಗುವುದು;

(ಉ) ಸದರಿ ಮಿಲ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರ ಸಂಖ್ಯೆ ಎಷ್ಟು ;

(ಊ) ಸದರಿ ನೂಲಿನ ಗಿರಣಿಯನ್ನು ಪುನರರಾಂಭಿಸಲು ಬೇಕಾಗುವ ಹಣ ಎಷ್ಟು; ಇದಕ್ಕೆ ಹಣಕಾಸಿನ ಮೂಲಗಳು ಯಾವುವು ; (ವಿವರ ನೀಡುವುದು)

(ಋ) ನೌಕರರಿಗೆ ನೀಡಲು ಬೇಕಾಗುವ ಹಣ ಎಷ್ಟು ? (ನಷ್ಟದ ಸಂಪೂರ್ಣ ವಿವರ ನೀಡುವುದು)

## ಪಿ.ಟಿ.ಸಿ.ಎಲ್. ನಿಯಮದಡಿಯಲ್ಲಿ ದರಖಾಸ್ತು ಜಮೀನು ಮಂಜೂರು ಬಗ್ಗೆ

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) –**

೧೧೯ (೯೩೪) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಳೆದ ೧೦ ವರ್ಷಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಭೂ ರಹಿತರಿಗೆ – ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಅನ್ಯರಿಗೆ ದರಖಾಸ್ತು ಮೂಲಕ ಮಂಜೂರು ಮಾಡಲಾಗಿರುವ ಜಮೀನೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ರೀತಿಯ ಮಂಜೂರಾತಿಗೆ ಯಾವ ಯಾವ ನಿಬಂಧನೆಗಳನ್ನು ವಿಧಿಸಲಾಗುತ್ತದೆ ;

(ಇ) ಈ ಹಿಂದೆ ದರಖಾಸ್ತಿನಲ್ಲಿ ಮಂಜೂರಾತಿ ಪಡೆದ ಅನುಸೂಚಿತ ಜಾತಿ ಮತ್ತು ಪಂಗಡದ ಜಮೀನಿಗೆ ಸಂಬಂಧಪಟ್ಟಂತೆ ಮಾರಾಟ ಮಾಡಲು ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಜನರಿಗೆ ಅನುಮತಿ ನೀಡಲಾಗಿದೆ ; ಈ ರೀತಿ ಅನುಮತಿ ನೀಡುವ ಸಂದರ್ಭದಲ್ಲಿ ಯಾವ ಯಾವ ನಿಬಂಧನೆಗಳನ್ನು ವಿಧಿಸಲಾಗಿದೆ ;

(ಈ) ಪಿಟಿಸಿಎಲ್ ನಿಯಮದಡಿ ಕಳೆದ ೧೦ ವರ್ಷಗಳಲ್ಲಿ ಎಷ್ಟು ಪ್ರಕರಣಗಳು ನೋಂದಣಿಯಾಗಿದೆ ; ಮತ್ತು ಇವುಗಳಲ್ಲಿ ಬಗೆಹರಿದ ಪ್ರಕರಣಗಳೆಷ್ಟು ; ಉಳಿಕೆ ಪ್ರಕರಣಗಳೆಷ್ಟು ?

## ಕಾಡು ಪ್ರಾಣಿಗಳ ಹಾವಳಿ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) –**

೧೨೦ (೧೦೪೫) ಅರಣ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ, ಹೆತ್ತೂರು ಹೋಬಳಿಯ ಪಶ್ಚಿಮ ಘಟ್ಟದ ಅರಣ್ಯಕ್ಕೆ ಹೊಂದಿಕೊಂಡಿರುವ ೭ ಗ್ರಾಮಗಳ ರೈತರು ಆನೆ, ಹುಲಿ ಮುಂತಾದ ಕಾಡು ಪ್ರಾಣಿಗಳ ಹಾವಳಿ ಕುರಿತು ಸರ್ಕಾರದ ಗಮನಕ್ಕೆ ತಂದಿರುವುದು ನಿಜವೆ ;

(ಆ) ಜಿಲ್ಲಾಧಿಕಾರಿಗಳು, ಜಿಲ್ಲಾ ಅರಣ್ಯಾಧಿಕಾರಿಗಳು ಅಥವಾ ಇತರೆ ಅಧಿಕಾರಿಗಳು ಈ ಗ್ರಾಮಗಳಿಗೆ ಭೇಟಿ ನೀಡಿ ಅವರ ಸಮಸ್ಯೆಯನ್ನು ಆಲಿಸಿದ್ದಾರೆಯೇ ;

(ಇ) ಈ ರೈತರು ಕಾಡುಪ್ರಾಣಿಗಳ ಹಾವಳಿಯಿಂದ ಜಮೀನು ಉಳಿಮೆ ಮಾಡಲಾಗದೆ ಹಾಳು ಬಿಟ್ಟಿರುವುದು ನಿಜವೇ ಅವರಿಗೆ ವಾರ್ಷಿಕ ಪರಿಹಾರಕ್ಕೆ ಸರ್ಕಾರ ಕ್ರಮ ಕೈಗೊಂಡಿದೆಯೇ ;

(ಈ) ಕೆ.ಸಿ. ಕಾರಿಯಪ್ಪ ಕೇಸಿನಲ್ಲಿ ಸುಪ್ರೀಂಕೋರ್ಟ್ ಯಾವ ಆದೇಶ ನೀಡಿದೆ ; ಅದಕ್ಕೆ ಸರ್ಕಾರದ ಕ್ರಮ ಏನು ;

(ಉ) ಜಿಲ್ಲಾಧಿಕಾರಿಗಳು, ಈ ಬಗ್ಗೆ ಸಭೆಗಳನ್ನು ನಡೆಸಿದ್ದಾರೆಯೇ ; ಕಾಡಿನಂಚಿನ ಗ್ರಾಮಗಳನ್ನು ವಶಪಡಿಸಿಕೊಳ್ಳುವುದರಿಂದ ಪಶ್ಚಿಮ ಘಟ್ಟ ಅರಣ್ಯ ವಿಸ್ತರಣೆ ಸಾಧ್ಯವಾಗುವುದೇ ; ಶೇಕಡಾ ೯೦ ರಷ್ಟು ಮಿಗಿಲಾಗಿ ರೈತರು ಒಪ್ಪಿಗೆ ನೀಡಿದ್ದಲ್ಲಿ, ಈ ಗ್ರಾಮಗಳನ್ನು ವಶಪಡಿಸಿಕೊಳ್ಳುಲು ಸರ್ಕಾರದ ಕಾರ್ಯಕ್ರಮ ಏನು ;

(ಊ) ಮುಖ್ಯಮಂತ್ರಿಗಳು ಹಾಗೂ ಅರಣ್ಯ ಮಂತ್ರಿಗಳು ಈ ಬಗ್ಗೆ ಸಭೆ ನಡೆಸಿ ಈ ಸಮಸ್ಯೆ ಬಗ್ಗೆ ಕೈಗೊಂಡಿರುವ ಕ್ರಮವೇನು ;

(ಋ) ಜಿಲ್ಲಾಧಿಕಾರಿಗಳು ನೊಂದ ರೈತರೊಂದಿಗೆ ಸಭೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆಯೇ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸುವರ್ಣ ಸೌಧ, ಬೆಳಗಾವಿ, ಪಿ7, ಕಾ.ಸೂ. , ಪ್ರತಿಗಳು 1500